ಓ.ಎಸ್. ನಂ.213/2018 ರಲ್ಲಿ
ಡಿ.ಡಬ್ಲ್ಯೂ-1(ಕೆ.ಎಸ್.ರುದ್ರೇಶ್)

ದಿನಾಂಕ 03-06-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ವಾದಿ ಪರ ಶ್ರೀ ಎನ್.ಸಿ.ಆರ್., ವಕೀಲರಿಂದಃ-

ನಾನು 10 ನೇ ತರಗತಿಯವರೆಗೆ ಕಲಿತಿದ್ದೇನೆ. ನನಗೆ ಕನ್ನಡ ಓದಲು, ಬರೆಯಲು ಬರುತ್ತದೆ. ನನಗೆ ಇಂಗ್ಲೀಷ್ ಓದಲು ಸ್ವಲ್ಪ ಬರುತ್ತದೆ. ನನ್ನ ಲಿಖಿತ ಹೇಳಿಕೆ ಹಾಗೂ ಮುಖ್ಯ ವಿಚಾರಣೆ ಪ್ರಮಾಣಪತ್ರದ ವಿಷಯಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ. ನೀವು ಯಾವುದೇ ಪತ್ರಕ್ಕೆ ಸಹಿ ಹಾಕುವಾಗ ಓದಿಯೇ ಸಹಿ ಮಾಡುತ್ತೀರಿ ಎಂದರೆ ಸಾಕ್ಷಿಯು ಕೆಲವು ದಾಖಲೆಗಳನ್ನು ಓದಿ ಸಹಿ ಮಾಡುತ್ತೇನೆ, ಕೆಲವು ದಾಖಲೆಗಳನ್ನು ಓದದೇ ಸಹಿ ಹಾಕುತ್ತೇನೆ ಎಂದು ನುಡಿಯುತ್ತಾರೆ. ನಾನು ಹುಷಾರಾಗಿದ್ದು, ಆರಾಮಾಗಿದ್ದಾಗ ಎಲ್ಲಾ ದಾಖಲೆಗಳನ್ನು ಓದಿ ತಿಳಿದುಕೊಂಡೇ ಸಹಿ ಹಾಕುತ್ತೇನೆ ಎಂದರೆ ಸರಿ.

2. 2 ನೇ ಪ್ರತಿವಾದಿ ಎಸ್.ಎಸ್.ಎಲ್.ಸಿ.,ವರೆಗೆ ಕಲಿತಿದ್ದಾರೆ. 2 ನೇ ಪ್ರತಿವಾದಿಗೆ ಯಾವುದೇ ಪತ್ರಗಳಿಗೆ, ದಾಖಲೆಗೆ ಸಹಿ ಹಾಕುವಾಗ ಓದಿ ತಿಳಿದುಕೊಂಡೇ ಸಹಿ ಹಾಕಬೇಕೆಂಬ ಸಾಮಾನ್ಯ ಜ್ಞಾನ ಇದೆ ಎಂದರೆ ಸಾಕ್ಷಿಯು ಇಲ್ಲ, ಅವರು ಅಂಗವಿಕಲರು ಎಂದು ನುಡಿಯುತ್ತಾರೆ. ಅವರಿಗೆ ಎರಡು ಕಿವಿ ಶೇಕಡ 90 ರಷ್ಟು ಕೇಳಿಸುವುದಿಲ್ಲ, ಜ್ಞಾಪಕ ಶಕ್ತಿ ಇಲ್ಲ. 2 ನೇ ಪ್ರತಿವಾದಿಗೆ ಎರಡೂ ಕಿವಿ ಕೇಳಿಸುವುದಿಲ್ಲ, ಅಂಗವಿಕಲರು, ಜ್ಞಾಪಕಶಕ್ತಿ ಇಲ್ಲ ಎಂದು ಲಿಖಿತ ಹೇಳಿಕೆಯಲ್ಲಿ ಹಾಗೂ ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿಲ್ಲ, ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿ. 2 ನೇ ಪ್ರತಿವಾದಿಯ ಪರವಾಗಿಯೂ ಸಾಕ್ಷ್ಯ ನುಡಿಯಲು ಪವರ್ ಆಫ್ ಅಟಾರ್ನಿ ಅಥವಾ ಯಾವುದೇ ದಾಖಲೆ

ನಾನು ಹಾಜರುಪಡಿಸಿಲ್ಲ.

3. ವಾದಿ ಮತ್ತು ಅವರ ಮಗ ದೊಡ್ಡೇರಿಯಲ್ಲಿ ವಾಸ ಎಂದರೆ ಸಾಕ್ಷಿಯು ದೊಡ್ಡೇರಿ ಗ್ರಾಮ ಎಂದು ಗೊತ್ತು ಎಂದು ನುಡಿಯುತ್ತಾರೆ. ನನಗೆ ಆರು ಜನ ಸಹೋದರಿಯರಲ್ಲಿ ಒಬ್ಬರು ತೀರಿಕೊಂಡಿದ್ದಾರೆ, ಐದು ಜನ ಜೀವಂತವಿದ್ದಾರೆ. ನನ್ನ ಸಹೋದರಿಯರೆಲ್ಲಾ ಅವರ ಗಂಡನ ಮನೆಯಲ್ಲಿ ವಾಸ ಎಂದರೆ ಸರಿ. ದಾವಾ ಸ್ವತ್ತು ಬಿಟ್ಟು ನಿಮಗೆ ಇನ್ನೂ ಎಷ್ಟು ಆಸ್ತಿಗಳಿವೆ ಎಂದರೆ ಸಾಕ್ಷಿಯು 4 ಎಕರೆ ಇದೆ, ಆದರೆ ದಾವಾ ಆಸ್ತಿಯಲ್ಲೇ ನನ್ನ ತಂದೆ, ನನ್ನ ತಮ್ಮ, ನನ್ನ ಮಗ, ನನ್ನ ಅಜ್ಜಿ, ತಾತರವರ ಸಮಾಧಿ ಇರುವುದು ಎಂದು ನುಡಿಯುತ್ತಾರೆ. ನಮ್ಮ ಪಿತ್ರಾರ್ಜಿತ ಆಸ್ತಿಗಳಲ್ಲಿ ನನ್ನ ಸಹೋದರಿಯರಿಗೆ ಯಾವುದೇ ಭಾಗ ಕೊಟ್ಟಿಲ್ಲ, ಎಲ್ಲರೂ ಒಟ್ಟಿಗೆ ಇದ್ದೇವೆ. ನನ್ನ ಸಹೋದರಿಯರಿಂದ ಯಾವುದೇ ಹಕ್ಕು ನಿವೃತ್ತಿ ಪತ್ರ ಬರೆಸಿಕೊಂಡಿಲ್ಲ.

4. ದಿನಾಂಕ 22.10.2019 ರಂದು ನಿಮ್ಮ ಸಹೋದರಿಯರಿಂದ ಈಗ ತೋರಿಸಿದ ದಾಖಲೆಯಂತೆ ನೀವು ಹಕ್ಕು ನಿವೃತ್ತಿ ಪತ್ರವನ್ನು ಬರೆಸಿಕೊಂಡಿದ್ದೀರಿ ಎಂದರೆ ಸಾಕ್ಷಿಯು ಹೌದು, ಆಸ್ತಿಯ ಸಂಬಂಧ ಸಾಲ ತೆಗೆದುಕೊಂಡಿದ್ದೆ, ಅದಕ್ಕೆ ಬರೆದುಕೊಟ್ಟರು ಎಂದು ನುಡಿಯುತ್ತಾರೆ. ಸದರಿ ದಾಖಲೆ ದಿನಾಂಕ 22.10.2019 ರ ಹಕ್ಕು ನಿವೃತ್ತಿ ಪತ್ರದ ಡಿಜಿಟಲ್ ಪ್ರತಿ. ಅದನ್ನು ನಿಪಿ-22 ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ವಇಚ್ಛೆಯಿಂದ ಒಂದೂವರೆ ತಿಂಗಳ ಹಿಂದೆ ನಿಪಿ-22 ನ್ನು ರದ್ದು ಮಾಡಿಸಿದ್ದೇನೆ ಎಂದು ನುಡಿಯುತ್ತಾರೆ. ನಿಪಿ-22 ರಂತೆ ನಿಮ್ಮ ಸಹೋದರಿಯರಿಗೆ ತಲಾ ಒಂದು ಲಕ್ಷ ಕೊಟ್ಟು ಪಿತ್ರಾರ್ಜಿತ ಆಸ್ತಿಗಳಲ್ಲಿ

ಅವರ ಹಕ್ಕು ಬಿಡುಗಡೆ ಮಾಡಿಸಿದ್ದೀರಿ ಎಂದರೆ ಸಾಕ್ಷಿಯು ನಾನು ಯಾವುದೇ ಹಣ ಸಹೋದರಿಯರಿಗೆ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ನಿಪಿ-22 ರಲ್ಲಿ ನಿಮ್ಮ ಸಹೋದರಿಯರಿಗೆ ತಲಾ ಒಂದು ಲಕ್ಷ ಕೊಟ್ಟಿದೆ ಎಂದು ಬರೆದಿದೆ ಎಂದರೆ ಸಾಕ್ಷಿಯು ಬರೆದಿದೆ, ನಾನು ಯಾವುದೇ ಹಣ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ನಿಪಿ-22 ರ ಬಗ್ಗೆ ನಿಮ್ಮ ಲಿಖಿತ ಹೇಳಿಕೆಯಲ್ಲಿ ಹಾಗೂ ನಿಮ್ಮ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ನೀವು ಹೇಳಿಲ್ಲ ಎಂದರೆ ಸಾಕ್ಷಿಯು ಯಾವುದೇ ಹಕ್ಕು ನಿವೃತ್ತಿ ಆಗಿಲ್ಲ, ಎಲ್ಲರೂ ಒಟ್ಟಿಗೆ ಇದ್ದೇವೆ ಎಂದು ನುಡಿಯುತ್ತಾರೆ.

5. ನಿಪಿ-3 ರ ಸ್ಟ್ಯಾಂಪ್ ಪೇಪರನ್ನು ನೀವೇ ಖರೀದಿ ಮಾಡಿದ್ದೀರಿ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಪಿ-3 ಕ್ರಯದ ಕರಾರಿಗೆಂದೇ ಖರೀದಿ ಮಾಡಿರುವ ಪತ್ರ ಎಂದರೆ ಸಾಕ್ಷಿಯು ನಾನು ಯಾವುದೇ ಸೇಲ್ ಅಗ್ರಿಮೆಂಟ್ ಮಾಡಿಲ್ಲ ಎಂದು ನುಡಿಯುತ್ತಾರೆ. ನಿಪಿ-3 ರಲ್ಲಿ ನಾನೇ ಷರಾ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು 2016 ರ ಕೊನೆಯಲ್ಲಿ ಗ್ಯಾಂಗ್ರೀನ್ ಸಮಸ್ಯೆಯಿಂದ ಆಸ್ಪತ್ರೆಗೆ ಸೇರಿದೆ. ಆಸ್ಪತ್ರೆಯಲ್ಲಿ ಮೂರು ತಿಂಗಳು ಇದ್ದೆ.

6. ನಿಡಿ-8 ನಾನೇ ಹಾಜರುಪಡಿಸಿರುವ ದಾಖಲೆ ಎಂದರೆ ಸರಿ. ನಿಡಿ-8 ರ ಪ್ರಕಾರ ನಾನು ಸಾಕ್ರಾ ಆಸ್ಪತ್ರೆಗೆ ದಾಖಲಾದದ್ದು ದಿನಾಂಕ 13.10.2016 ರಂದು ಎಂದರೆ ಸರಿ. ದಿನಾಂಕ 26.10.2016 ರಂದು ಆಸ್ಪತ್ರೆಯಿಂದ ಬಿಡುಗಡೆಯಾದೆ ಎಂದರೆ ಸರಿ. ಸಾಕ್ಷಿಯು ಸ್ವಇಚ್ಛೆಯಿಂದ ಅದಕ್ಕೂ ಮೊದಲು ಫೋರ್ಟೀಸ್ ಮತ್ತು ಎಂ.ಎಸ್.ರಾಮಯ್ಯ ಆಸ್ಪತ್ರೆಯಲ್ಲಿ ಒಂದು-ಒಂದೂವರೆ ತಿಂಗಳು ಇದ್ದೆ ಎಂದು

ನುಡಿಯುತ್ತಾರೆ. ಪೋರ್ಟೀಸ್ ಹಾಗೂ ಎಂ.ಎಸ್.ರಾಮಯ್ಯ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಬಗ್ಗೆ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ನಿಡಿ-8 ರಂತೆ ನಾನು ಆಸ್ಪತ್ರೆಯಿಂದ ಬಿಡುಗಡೆಯಾಗುವಾಗ ಸ್ಟೇಬಲ್ ಆಗಿದ್ದೆ ಎಂದು ವರದಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

7. ವಾದಿಯವರು ಲೇವಾದೇವಿ ವ್ಯವಹಾರ ಮಾಡುತ್ತಿರುವ ಬಗ್ಗೆ ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ವಾದಿಯಿಂದ ಸಾಲ ಪಡೆದಿದ್ದಾರೆ ಎಂದು ಹೇಳುವ ವ್ಯಕ್ತಿಗಳನ್ನು ಸಾಕ್ಷಿದಾರರಾಗಿ ವಿಚಾರಣೆ ಮಾಡಿಸಲು ನಾನು ಸಾಕ್ಷಿದಾರರ ಪಟ್ಟಿಯನ್ನು ಹಾಜರುಪಡಿಸಿಲ್ಲ, ಏಕೆಂದರೆ ಎಲ್ಲರೂ ವಾದಿಗಳ ಪರವಾಗಿದ್ದಾರೆ. ವಾದಿಯ ಹೆಸರಿಗೆ 15 ರಿಂದ 20 ಎಕರೆ ಜಮೀನಿದೆ ಎಂದರೆ ನನಗೆ ಮಾಹಿತಿ ಇಲ್ಲ. ಪ್ರಕಾಶ್‌ರವರು ಮಾತ್ರ ನನಗೆ ಗೊತ್ತು. ಅವರೊಂದಿಗೆ ನನ್ನ ವ್ಯವಹಾರ. ನಿಡಿ-3 ಮತ್ತು ನಿಡಿ-4 ದಾವಾ ಸ್ವತ್ತಿಗೆ ಸಂಬಂಧಪಟ್ಟ ದಾಖಲೆಗಳಲ್ಲ. ಸಾಕ್ಷಿಯು ಸ್ವಇಚ್ಛೆಯಿಂದ ಮೊದಲು ಭದ್ರತೆಗಾಗಿ ಹಣ ಪಡೆದುಕೊಂಡಿದ್ದು ಅದನ್ನು ಪ್ರಕಾಶ್‌ರವರ ತಂದೆ ಕೈಯಲ್ಲಿ ರದ್ದಾಯಿತಿ ಪತ್ರ ಮಾಡಿಸಿಕೊಟ್ಟಿರುವ ದಾಖಲೆ, ವ್ಯವಹಾರ ಎಲ್ಲಾ ಪ್ರಕಾಶ್‌ರವರು ಮಾಡಿದ್ದು, ತಂದೆಯನ್ನು ಇಟ್ಟುಕೊಂಡು ಮಾಡಿದ್ದು ಎಂದು ನುಡಿಯುತ್ತಾರೆ. ನಿಡಿ-3 ಮತ್ತು ನಿಡಿ-4 ರಲ್ಲಿ ವೀರಣ್ಣರವರು ಮಾತ್ರ ಸಹಿ ಮಾಡಿರುವುದು, ಪ್ರಕಾಶ್‌ರವರು ಸಹಿ ಮಾಡಿಲ್ಲ ಎಂದರೆ ಸರಿ.

8. ನಿಡಿ-3 ರಲ್ಲಿ ಸಾಲದ ಭದ್ರತೆಗಾಗಿ ಮಾಡಿರುವುದು ಎಂದು ಬರೆದಿಲ್ಲ ಎಂದರೆ ಸಾಕ್ಷಿಯು ಅಲ್ಲಿ ಬರೆದಿಲ್ಲ, ಆದರೆ ದಾಖಲೆ

ಮಾಡಿಕೊಟ್ಟಿರುವುದು ಭದ್ರತೆಗಾಗಿ ಎಂದು ನುಡಿಯುತ್ತಾರೆ. ನಿಡಿ-4 ರಲ್ಲಿ ಸಹ ಭದ್ರತೆಗಾಗಿ ಮಾಡಿಕೊಟ್ಟದ್ದು, ಸಾಲದ ಹಣ ವಾಪಸ್ ಕೊಟ್ಟಿದ್ದಾರೆ ಎಂದು ನಮೂದು ಮಾಡಿಲ್ಲ, ಆದರೆ ಭದ್ರತೆಗಾಗಿ ಮಾಡಿಕೊಟ್ಟದ್ದು ಎಂದು ಸಾಕ್ಷಿಯು ನುಡಿಯುತ್ತಾರೆ. ಸಾಲದ ಭದ್ರತೆಗಾಗಿ ಎಂದು ಬರೆಸಲು ನಿಮಗೆ ತೊಂದರೆ ಇತ್ತಾ ಎಂದರೆ ಸಾಕ್ಷಿಯು ಅವರು ಒಪ್ಪುತ್ತಿರಲಿಲ್ಲ, ಪ್ರಕಾಶ್‌ರವರು ತುಂಬಾ ಬುದ್ಧಿವಂತರು ಎಂದು ನುಡಿಯುತ್ತಾರೆ. ನಾನು ಕೃಷಿಕ.

9. ನಿಪಿ-2 ರಲ್ಲಿ ಕೈಸಾಲ ತೀರಿಸಲು, ಕುಟುಂಬದ ಪೋಷಣೆಗಾಗಿ ಮಾರಾಟ ಮಾಡುತ್ತಿದ್ದೇವೆ ಎಂದು ಬರೆದಿದೆ ಎಂದರೆ ಸಾಕ್ಷಿಯು ನಾನು ಭದ್ರತೆಗೆ ಮಾಡಿರುವುದು, ಮಾರಾಟ ಮಾಡಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು 12,50,000/- ರೂಗಳಿಗೆ ವಾದಿಗೆ ಮಾರಾಟ ಮಾಡಲು ಒಪ್ಪಿ ಮುಂಗಡ ಹಣ 10 ಲಕ್ಷ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 31.10.2015 ರಂದು ಸ್ವಾಧೀನ ರಹಿತ ಕರಾರು ಪತ್ರ ಬರೆಸಿ, ನೋಂದಣಿ ಮಾಡಿಸಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 12.12.2016 ರಂದು ವಾದಿಯನ್ನು ಭೇಟಿ ಮಾಡಿ 4,45,000/- ರೂಗಳನ್ನು ಮುಂದುವರೆದ ಮುಂಗಡ ಹಣ ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿಯು ಆ ಸಮಯದಲ್ಲಿ ನನಗೆ ನಡೆದಾಡಲು ಆಗುತ್ತಿರಲಿಲ್ಲ, ನಿಷ್ಪ್ರಯೋಜಕನಾಗಿದ್ದೆ, ಹಣ ತೆಗೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ನಿಪಿ-3 ರಂತೆ ಮುಂದುವರೆದ ಕರಾರು ಪತ್ರ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

10. ಓ.ಎಸ್.431/2011 ದಾವೆಯನ್ನು ವಾದಿಯವರು

ಎಲ್.ವಿ.ಬಸವರಾಜಯ್ಯರವರ ವಿರುದ್ಧ ನಿರ್ದಿಷ್ಟ ಕರಾರಿನ ನಿರ್ವಹಣೆಗಾಗಿ ಸಲ್ಲಿಸಿದ್ದು, ಆ ದಾವೆಯಲ್ಲಿ ನೀವು ಈ ದಾವೆಯ ವಾದಿಯ ಪರವಾಗಿ ಪಿ.ಡಬ್ಲ್ಯೂ-2 ರವರಂತೆ ಸಾಕ್ಷ್ಯ ನುಡಿದಿದ್ದೀರಿ ಎಂದರೆ ಸಾಕ್ಷಿಯು ನನ್ನನ್ನು ಪ್ರಕಾಶ್‌ರವರು ಒತ್ತಾಯ ಪೂರ್ವಕವಾಗಿ ಕರೆದುಕೊಂಡು ಹೋಗಿ ನಿನಗೆ ದುಡ್ಡು ಕೊಡಬೇಕಾದರೆ ಸಾಕ್ಷ್ಯ ಹೇಳು ಎಂದು ನನ್ನಿಂದ ಸಾಕ್ಷ್ಯ ಹೇಳಿಸಿದ್ದಾರೆ, ಅವರು ಸಹ ಭದ್ರತೆಗಾಗಿ ದಾಖಲೆ ಮಾಡಿಕೊಟ್ಟಿದ್ದರು ಎಂದು ನುಡಿಯುತ್ತಾರೆ. ನಾನು ಓ.ಎಸ್.431/2011 ದಾವೆಯಲ್ಲಿ ವೀರಣ್ಣರವರ ಪರವಾಗಿ ಸಾಕ್ಷಿ ಹೇಳಿದ್ದೀರಿ ಎಂದರೆ ಸಾಕ್ಷಿಯು ಪ್ರಕಾಶ್‌ರವರೇ ಹೇಳಿಸಿರುವುದು ಎಂದು ನುಡಿಯುತ್ತಾರೆ. ಆ ಪ್ರಕರಣ ವೀರಣ್ಣರವರ ಪರವಾಗಿ ಡಿಕ್ರಿಯಾಗಿದೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ-11 ನೀವು ವೀರಣ್ಣರವರಿಗೆ ಬರೆದಿರುವ ಪತ್ರ ಎಂದರೆ ಸಾಕ್ಷಿಯು ಆ ಸಮಯದಲ್ಲಿ ನನಗೆ ಪೇಪರ್ ಬರೆಯಲು ಕೈಗೆ ಶಕ್ತಿ ಇರಲಿಲ್ಲ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ 2011 ರ ದಾವೆಯ ವಾದ-ವಿವಾದ ಆಲಿಸಲು ಇರುವುದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.